**ಸಾಕ್ಷಿಯನ್ನು ದಿನಾಂಕಃ 12.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್ ಆರ್ ಎನ್ ವಕೀಲರಿಂದಃ**

ನನ್ನ ಗಂಡನ ತಂದೆಯ ಹೆಸರು ವೆಂಕಟನಾಯಕ ಎಂಬುದಾಗಿರುತ್ತದೆ. ಸದರಿ ವೆಂಕಟನಾಯಕರಿಗೆ ಎಷ್ಟು ಜನ ಗಂಡು ಮಕ್ಕಳು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ವೆಂಕಟನಾಯಕರಿಗೆ ನನ್ನ ಗಂಡ 3 ನೇ ಮಗ ಆಗಿರುತ್ತಾರೆ. ಮೊದಲನೇ ಮಗನ ಹೆಸರು ವೆಂಕಟನಾಯಕ ಹಾಗೂ 2 ನೇ ಮಗನ ಹೆಸರು ಕುಳ್ಳ ಅಂಕನಾಯಕ ಆಗಿರುತ್ತದೆ. ಸದರಿ ಕುಳ್ಳ ಅಂಕನಾಯಕರಿಗೆ ಇನ್ನೊಂದು ಹೆಸರು ಹುಚ್ಚನಾಯಕ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ಸದರಿ ಕುಳ್ಳ ಅಂಕನಾಯಕ @ ಹುಚ್ಚನಾಯಕ ನನ್ನ ಹಾಗೂ ನನ್ನ ಗಂಡನ ವಿರುದ್ದ 1997 ನೇ ಇಸವಿಯಲ್ಲಿ ಹುಣಸೂರು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 193/1997 ರಂದು ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಾವೆ ದಿಃ22.05.2005 ರಂದು ನನ್ನ ಹಾಗೂ ನನ್ನ ಗಂಡನ ವಿರುದ್ಧ ಹಾಗೂ ಸದರಿ ಕುಳ್ಳ ಅಂಕನಾಯಕ @ ಹುಚ್ಚನಾಯಕ ರವರ ಪರವಾಗಿ ಡಿಕ್ರಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯ ವಿರುದ್ಧ ನಾವು ಮೈಸೂರಿನ ಎಫ್.ಟಿ.ಸಿ-4 ನ್ಯಾಯಾಲಯದಲ್ಲಿ ಆರ್.ಎ. ಸಂ.31/2005 ರಂತೆ ಅಪೀಲು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ಉಚ್ಚ ನ್ಯಾಯಾಲಯದಲ್ಲಿ ದಾವೆ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ದಿಃ 26.02.2010 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸಂಬಂಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾವೆ ಇರುತ್ತದೆ. ಸದರಿ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಕೇಸು ಕುಳ್ಳ

ಅಂಕನಾಯಕನ ವಿರುದ್ಧವೇ ಇರುತ್ತದೆ. ಸದರಿ ಉಚ್ಚ ನ್ಯಾಯಾಲಯದಲ್ಲಿರುವ ಆರ್.ಎಸ್.ಎ 1421/2010 ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲವೆಂದು ನುಡಿಯುತ್ತಾರೆ. ಸದರಿ ಮೇಲ್ಮನವಿ ದಿಃ 16.11.2020 ರಂದು ವಜಾ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಆ ರೀತಿ ಮೇಲ್ಮನವಿ ವಜಾ ಆದ ವಿಚಾರ ಗೊತ್ತಿದ್ದಾಗಿಯೂ ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಆಸ್ತಿಗೂ ನನಗೂ ಹಾಗೂ ನನ್ನ ಕುಟುಂಬದವರಿಗೂ ಸಂಬಂಧವಿರುವುದಿಲ್ಲ ಬದಲಾಗಿ ಅದು ಕುಳ್ಳ ಅಂಕನಾಯ @ ಹುಚ್ಚನಾಯಕನಿಗೆ ಮಂಜೂರಾದ ಆಸ್ತಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**C/c.ಎರಡನೇ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**